ವಿಶ್ವವಾಣಿ

ಸಂಪಾದಕೀಯ

ಇನ್ನೆಷ್ಟು ಬಲಿಯಾಗಬೇಕು?

ಐಪಿಎಲ್ ಬೆಟ್ಟಿಂಗ್ ಹಾಗೂ ಆನ್‌ಲೈನ್ ಗೇಮಿಂಗ್ ವ್ಯಸನಕ್ಕೆ ಬಲಿಯಾಗಿ ಬರೋಬ್ಬರಿ ಒಂದೂವರೆ ಕೋಟಿ ರುಪಾಯಿ ಸಾಲ ಮಾಡಿಕೊಂಡಿದ್ದ ವ್ಯಕ್ತಿಯೊಬ್ಬರ ಪತ್ನಿ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಘಟನೆ ಚಿತ್ರದುರ್ಗದಿಂದ ವರದಿಯಾಗಿದೆ. ಪತಿಗೆ ಸಾಲ ಕೊಟ್ಟವರು ಮನೆಬಾಗಿಲಿಗೆ ಬಂದು ಪೀಡಿಸುತ್ತಿದ್ದುದನ್ನು ಕಂಡು ನೊಂದ ಆ ಹೆಣ್ಣುಜೀವ ಈ ದುರಂತಕ್ಕೆ ಒಡ್ಡಿಕೊಂಡಿದೆ. ಇದು ನಿಜಕ್ಕೂ ವಿಷಾದನೀಯ ಸಂಗತಿ. ಆನ್‌ಲೈನ್ ಗೇಮಿಂಗ್‌ನ ಚಾಳಿಗೆ ಸಿಲುಕಿ ಬದುಕನ್ನು ಮೂರಾಬಟ್ಟೆ ಮಾಡಿಕೊಂಡವರು ಸಾಕಷ್ಟು ಮಂದಿ ಕಾಣಬರುತ್ತಿರುವ ಹಿನ್ನೆಲೆಯಲ್ಲಿ ಈ ಪಿಡುಗಿಗೆ ಲಗಾಮು ಹಾಕಬೇಕು ಎಂಬ ಕೂಗು ಬಹಳ ದಿನಗಳಿಂದ ಕೇಳಿಬರುತ್ತಿದೆ; ಆದರೆ ಸಂಬಂಧಪಟ್ಟವರು ಅದೇಕೋ ಮನಸ್ಸು ಮಾಡುತ್ತಿಲ್ಲ. ಆನ್‌ಲೈನ್ ಗೇಮಿಂಗ್ ಅಥವಾ ಜೂಜಿನ ವಕ್ತಾರರು, 'ಈ ಆಟವು ಚಾಳಿಯಾಗಿ ಪರಿಣಮಿಸಬಹುದು' ಎಂದು ಮುದ್ರಣ ಮಾಧ್ಯಮಗಳಲ್ಲಿ ಸಣ್ಣಕ್ಷರಗಳಲ್ಲಿ ಮತ್ತು ದೃಶ್ಯಮಾಧ್ಯಮಗಳಲ್ಲಿ ಸಣ್ಣದನಿಯಲ್ಲಿ (ಗಡಿಬಿಡಿಯಲ್ಲಿ) ಹೇಳಿ ಕೈತೊಳೆದುಕೊಳ್ಳುವುದಿದೆ. ಹೀಗಾಗಿ, ಸಂಭಾವ್ಯ ಅಪಾಯದ ಅರಿವಿಲ್ಲದೆ ಜೂಜು ಎಂಬ ಬೆಂಕಿಯ ಸಂಗವನ್ನು ಅರಸಿ ಹೋಗುವ ಪತಂಗಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ನಿಲ್ಲಬೇಕೆಂದರೆ, ಬೆಟ್ಟಿಂಗ್ ಮತ್ತು ಆನ್‌ಲೈನ್ ಜೂಜುಗಳು ಅದೆಷ್ಟು ಕೆಡುಕನ್ನುಉಂಟುಮಾಡುತ್ತವೆ ಹಾಗೂ ಆರ್ಥಿಕ, ಸಾಮಾಜಿಕ, ಕೌಟುಂಬಿಕ ತಳಹದಿಗಳು ಅದೆಷ್ಟರ ಮಟ್ಟಿಗೆ ಕುಸಿಯುತ್ತವೆ ಎಂಬುದನ್ನು ಜನರಿಗೆ ಮನದಟ್ಟಾಗುವಂತೆ ತಿಳಿಹೇಳಬೇಕಿದೆ. ಕೌರವರು ನೀಡಿದ ಜೂಜಿನ ಪಂಥಾಹ್ವಾನವನ್ನು ಸ್ವೀಕರಿಸಿದ ಪಾಂಡವರು ಏನೆಲ್ಲಾ ನೋವು ಮತ್ತು ಅವಮಾನಗಳನ್ನು ಅನುಭವಿಸಬೇಕಾಗಿ ಬಂತು ಎಂಬುದನ್ನು ಹೇಳಿಕೊಂಡು-ಕೇಳಿಕೊಂಡೇ ಬಂದಿರುವ ಪರಂಪರೆ ನಮ್ಮದು. ಇಷ್ಟಾಗಿಯೂ ಅದೇ ಕೂಪದಲ್ಲಿ ಮತ್ತೆ ಮತ್ತೆ ಬಿದ್ದು ಒದ್ದಾಡುವುದೇಕೆ? ಸಂಪತ್ತಿನ ಗಳಿಕೆ ತಪ್ಪಲ್ಲ, ಆದರೆ ಅದಕ್ಕೊಂದು ವಿಹಿತವಾದ ಮಾರ್ಗವಿದೆ. ಅದೇ ಪ್ರಾಮಾಣಿಕ ದುಡಿಮೆ. ಪರಿಶ್ರಮದ ದುಡಿಮೆಯಿಂದ ದಕ್ಕುವ ಸಂತಸ ಮತ್ತು ನೆಮ್ಮದಿಗಳು, ಜೂಜಿನ ಮಾರ್ಗೋಪಾಯದ ಗಳಿಕೆಯಿಂದ ಖಂಡಿತ ಸಿಗವು ಎಂಬುದನ್ನು ಜನರು ಇನ್ನಾದರೂ ಅರಿಯಲಿ; ಜೂಜಿನ ಅಡ್ಡೆಗಳಿಗೆ ಲಗಾಮು ಹಾಕುವತ್ತ ಆಳುಗರೂ ಗಮನ ಹರಿಸಲಿ.

ಸೊಂಪಾದಕೀಯ

ಜಾಮೀನು ಜಾಮೂನು

ಅದೇನೋ ಅಂತಾರಲ್ಲ, ದೇವರು ಕೊಟ್ರೂ ಪೂಜಾರಿ ಕೊಡ್ಲಿಲ್ಲ ಅಂತ. ಅಂಥ ಕಥೆ ಇದು. ಪಾಪ, ಜೈಲರ್‌ಗಳು ಮಾಡಿದ ತಪ್ಪಿನಿಂದ ತಪ್ಪೇ ಮಾಡದೇ ಜೈಲಲ್ಲಿ ಕೊಳೆಯಬೇಕಾದ ಪರಿಸ್ಥಿತಿ ಗುಜರಾತ್‌ನ ಚಂದನ್ ಠಾಕೂರ್ ಎಂಬಾತನದ್ದು. ಈತ ಕೊಲೆ ಪ್ರಕರಣವೊಂದರಲ್ಲಿ ತಗಾಲಾಕಿಕೊಂಡಿದ್ದ. ಕೋರ್ಟು ಶಿಕ್ಷೆಯನ್ನು ಅಮಾನತು ಮಾಡಿ ಈತನಿಗೆ 2020ರಲ್ಲೇ ಜಾಮೀನು ಕೊಟ್ಟಿತ್ತು. ಆದರೆ ಕೋರ್ಟು ಇಮೇಲಲ್ಲಿ ಕಳಿಸಿದ ಆರ್ಡರ್ ಅನ್ನು ಜೈಲಲ್ಲಿರೋರು ನೋಡಿರಲಿಲ್ಲವಂತೆ. ಹಾಗಾಗಿ ಈತ ಪಾಪ ತನಗಿನ್ನೂ ಜಾಮೀನು ಸಿಕ್ಕಿಲ್ಲ ಅಂದುಕೊಂಡೇ ಕತ್ತಲ ಕೋಣೆಯಲ್ಲಿ ಕೂತಿದ್ದ. ಕತ್ಲಲ್ಲಿ ಕೂತಿದ್ದ ಈತನಿಗೆ ಜಾಮೀನು ಕೊಡಿಸೋಕೆ ಯಾವತ್ತು ಹೋಗ್ಬಾರ್ದು ರೀ ಅಂತ ಇದುವರೆಗೆ ಯಾರೂ ಈತನ ಸಂಪರ್ಕಕ್ಕೆ ಬಂದಿರಲಿಲ್ಲ. ಈಗ ಮೂರು ವರ್ಷದ ನಂತರ ಮತ್ತೆ ಕೋರ್ಟಿಗೆ ಜಾಮೀನಿಗಾಗಿ ಅರ್ಜಿ ಹಾಕಿದಾಗ, ಅಯ್ಯೋ, ನಿಂಗೆ ಎಷ್ಟ್ ಸಲನಯ್ಯಾ ನ್ಯಾಯ ಕೊಡಿಸೋದು ಅಂತ ಕೋರ್ಟು ಪ್ರಶ್ನೆ ಹಾಕಿದೆ. ಅದಕ್ಕೆ ಕಾರಣ ಕೋರ್ಟಿನ ರೆಕಾರ್ಡುಗಳ ಪ್ರಕಾರ ಈತ 2020ರಲ್ಲೇ ಬಿಡುಗಡೆ ಆಗಿದ್ದಾನೆ. ಈಗ ಕೋರ್ಟು ಮೇಲಲ್ಲಿ ಕಳಿಸಿದ್ರೂ ಕಣ್ಣೆತ್ತಿ ನೋಡದ ಜೈಲರ್‌ಗೆ 1 ಲಕ್ಷ ರುಪಾಯಿ ದಂಡ ವಿಧಿಸಲಾಗಿದೆ. ಪಾಪ, ಜೈಲಲ್ಲಿ ಇಂಟರ್ನೆಟ್ ಇರಲಿಲ್ಲವೋ ಏನೋ, ಒಟ್ಟಿನಲ್ಲಿ ಈಗ ಆ ಜೈಲರ್ ಒಂದು ಲಕ್ಷ ದಂಡ ಪೀಕುವಂತಾಗಿದೆ. ಅನ್ಯಾಯವಾಗಿ ಮೂರು ವರ್ಷ ಜೈಲಲ್ಲಿ ಕಳೆದಿದ್ದಕ್ಕೆ ಬರೀ ಒಂದು ಲಕ್ಷನಾ ಅಂತ ಚಂದನ್ ಠಾಕೂರ್ ಪ್ರಶ್ನೆ ಮಾಡಿಲ್ಲ. ಆದರೂ 3 ವರ್ಷ ಶಿಕ್ಷೆ ಆಗಿರುವ ಆರೋಪಿಯೊಬ್ಬ ಒಂದು ಲಕ್ಷ ಹಣ ಕೊಟ್ರೆ ಅವನನ್ನು ಹಂಗೇ ಬಿಟ್ಟು ಬಿಡುತ್ತದಾ ನಮ್ಮ ಕಾನೂನು ವ್ಯವಸ್ಥೆ ಅನ್ನೋದು ಕೇಳಬೇಕಾದ ಪ್ರಶ್ನೆ ಬಿಡಿ. ಆದರೂ ಇಂಥ ಗಂಭೀರ ವಿಷಯಗಳಲ್ಲಿ ಇಷ್ಟೊಂದು ನಿರ್ಲಕ್ಷ್ಯ ತೋರಿಸಿರುವ ಜೈಲರ್‌ಗಳನ್ನು ನೋಡಿದಾಗ ಸಿಟ್ಟು ಬರೋದು ಸಹಜ. ಮೊದಲೇ ನಮ್ಮ ದೇಶದ ಕೋರ್ಟುಗಳಲ್ಲಿ ಕೇಸುಗಳು ಇತ್ಯರ್ಥ ಆಗೋದು ವಿಳಂಬ. ಅಂಥದ್ರಲ್ಲಿ ಕೋರ್ಟು ತೀರ್ಪು ಕೊಟ್ರೂ ಅದನ್ನು ಜೈಲರ್‌ಗಳು ನೋಡೇ ಇಲ್ಲ ಅಂದ್ರೆ, ಹೆಂಗೆ? ಒಟ್ಟಿನಲ್ಲಿ ಈ ಸುದ್ದಿ ಕೇಳಿ, ನಮ್ಮ ರಜನೀಕಾಂತ್ ಅವರಂಥ ಜೈಲರ್ ಇದ್ದಿದ್ರೆ ಇಂಥ ಅನಾಹುತ ಆಗ್ತಾ ಇರಲಿಲ್ಲ ಬಿಡಿ ಅಂತ ಜೈಲಿನಲ್ಲಿರೋ ಖೈದಿಗಳು ಲೊಚಗುಟ್ಟುತ್ತಿದ್ದಾರಂತೆ.

ಸಂಪಾದಕರ ಸದ್ಯಶೋಧನೆ

ಚುನಾವಣೆ ಸ್ವಾರಸ್ಯಗಳು

ಜಗತ್ತಿನಲ್ಲಿಯೇ ಭಾರತದ ಚುನಾವಣಾ ವ್ಯವಸ್ಥೆ ಅದ್ಭುತವಾದುದು. ಭಾರತದಂಥ ವಿಶಾಲ ಮತ್ತು ನೂರಾರು ಕೋಟಿ ಮತದಾರರು ಇರುವ ದೇಶದಲ್ಲಿ ಲೋಕಸಭಾ ಚುನಾವಣೆಯನ್ನು ಸಂಘಟಿಸುವುದು ಸಣ್ಣ ಕೆಲಸವಲ್ಲ. ಈ ಸಲ ಏಳು ಹಂತಗಳಲ್ಲಿ ದೇಶಾದ್ಯಂತ ಚುನಾವಣೆಗಳನ್ನು ನಡೆಸುತ್ತಿರುವ ಭಾರತೀಯ ಚುನಾವಣಾ ಆಯೋಗ ಕಳೆದ ಒಂದು ವರ್ಷದಿಂದ ಮಾಡಿಕೊಂಡಿರುವ ಸಿದ್ಧತೆಗಳನ್ನು ನೋಡಿದರೆ ಎಂಥವರಿಗಾದರೂ ಅಚ್ಚರಿಯಾಗುತ್ತದೆ. ಪ್ರತಿ ಚುನಾವಣೆಯೂ ಸ್ವಾರಸ್ಯಕರ ಸಂಗತಿಗಳನ್ನು ಒಳಗೊಂಡಿರುವುದು ಸಾಮಾನ್ಯ. ●2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಛತ್ತೀಸ್‌ಗಢದ ಮಹಾಸಮುಂಡ್ ಕ್ಷೇತ್ರದಿಂದ ಚಂದುಲಾಲ್ ಸಾಹು ಹೆಸರಿನ 11 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಒಂದೇ ಹೆಸರು ಮತ್ತು ವಿವಿಧ ಚುನಾವಣಾ ಚಿಹ್ನೆಗಳ ಮೂಲಕ ಮತದಾರರನ್ನು ಗೊಂದಲಗೊಳಿಸಲು ಬಲೂನ್, ಸೀಲಿಂಗ್ ಫ್ಯಾನ್, ಬ್ಯಾಟ್, ಆಟೋ ರಿಕ್ಷಾ, ಬ್ರೆಡ್, ಟಿವಿ, ಬ್ಯಾಟ್ಸ್‌ಮನ್, ಬೆಲ್ಟ್, ಕಪ್ಪು ಹಲಗೆ ಮತ್ತು ಬಾಟಲಿಯಂಥ ಚಿಹ್ನೆಗಳನ್ನು ಧರಿಸಿ ಇನ್ನೂ 10 ಡಮ್ಮಿ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ಕಣಕ್ಕೆ ಇಳಿಸಲಾಗಿತ್ತು. ●1952ರಿಂದ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಅಥವಾ ಸ್ವತಂತ್ರ ಅಭ್ಯರ್ಥಿಯಾಗಿ ಸೆಣಸುವವರ ಸಂಖ್ಯೆ ಹೆಚ್ಚಾಗುತ್ತಲೇ ಹೋಗುತ್ತಿದೆ. 1952ರಲ್ಲಿ 1,874 ಮಂದಿ ಸೆಣಸಿದ್ದರು. ಕಳೆದ ಚುನಾವಣೆಯಲ್ಲಿ, ಅಂದರೆ 2019ರಲ್ಲಿ 8,039 ಮಂದಿ ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಒಂದು ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಗಳ ಸಂಖ್ಯೆ ಸರಾಸರಿ 4.67 ಅಭ್ಯರ್ಥಿಗಳಿಂದ, 14.8ಕ್ಕೆ ಏರಿರುವುದನ್ನು ನೋಡಬಹುದು. ●ಆರನೇ ಲೋಕಸಭಾ ಚುನಾವಣೆ ತನಕ ಒಂದು ಕ್ಷೇತ್ರದಲ್ಲಿ ಹೆಚ್ಚೆಂದರೆ ಮೂರರಿಂದ ಐದು ಪಕ್ಷೇತರ ಅಭ್ಯರ್ಥಿಗಳು ಸೆಣಸುತ್ತಿದ್ದರು. 2019ರ ಲೋಕಸಭಾ ಚುನಾವಣೆಯ ವಿವರಗಳನ್ನು ಗಮನಿಸಿದರೆ, ಭಾರತದಲ್ಲಿ ಅತಿ ಹೆಚ್ಚು ಪಕ್ಷೇತರ ಅಭ್ಯರ್ಥಿಗಳು ಕಣಕ್ಕಿಳಿದ ರಾಜ್ಯವೆಂದರೆ ತೆಲಂಗಾಣ. ನಿಜಾಮಾಬಾದ್ ಕ್ಷೇತ್ರವೊಂದರಲ್ಲೇ 185 ಅಭ್ಯರ್ಥಿಗಳು ಸೆಣಸಿದ್ದರು. ತೆಲಂಗಾಣ ನಂತರ, ಪಕ್ಷೇತರ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಿರುವ ರಾಜ್ಯವೆಂದರೆ ತಮಿಳುನಾಡು. ಕಳೆದ ಚುನಾವಣೆಯಲ್ಲಿ 542 ಲೋಕಸಭಾ ಕ್ಷೇತ್ರಗಳ ಪೈಕಿ, ಬಿಜೆಪಿ ಮತ್ತು ಕಾಂಗ್ರೆಸ್ ಅನುಕ್ರಮವಾಗಿ 435 ಮತ್ತು 420 ಕ್ಷೇತ್ರಗಳಲ್ಲಿ ಸೆಣಸಿದ್ದವು. ●ಚುನಾವಣಾ ಕಣದಲ್ಲಿ ಸ್ವತಂತ್ರ ಅಭ್ಯರ್ಥಿಗಳ ಸ್ಪರ್ಧೆಗೆ ಕಡಿವಾಣ ಹಾಕಲು ಚುನಾವಣಾ ಆಯೋಗವು ಸೆಕ್ಯುರಿಟಿ ಡೆಪಾಸಿಟ್ ಹಣದ ಮೊತ್ತವನ್ನು ಐನೂರು ರುಪಾಯಿಗಳಿಂದ ಹತ್ತು ಸಾವಿರ ರುಪಾಯಿಗೆ ಏರಿಸಿತು. ಇದರಿಂದ ಪಕ್ಷೇತರರ ಸಂಖ್ಯೆ ಕುಗ್ಗಲು ಸಹಾಯಕವಾಯಿತು. ●1952ರಲ್ಲಿ ಚುನಾವಣೆ ನಡೆದಾಗ, ದೇಶವ್ಯಾಪಿ ಮತದಾರರು ಮತಪೆಟ್ಟಿಗೆಗಳನ್ನು ಹೂವಿನಿಂದ ಅಲಂಕರಿಸಿ, ಪೂಜೆ ಮಾಡಿ, ಕರ್ಪೂರದ ಆರತಿ ಎತ್ತಿ ಸಂಭ್ರಮಪಟ್ಟಿದ್ದರು. ಇಲೆಕ್ಟ್ರಾನಿಕ್ ಮತಯಂತ್ರಗಳು ಬಂದ ನಂತರ, ಮತಪೆಟ್ಟಿಗೆಗಳಿಗೆ ಪೂಜೆ ಮಾಡುವುದು ಕಮ್ಮಿಯಾಗಿದೆ. ●2008ರ ಮೇಘಾಲಯ ರಾಜ್ಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದ 'ಅಡಾಲ್ಫ್ ಲು ಹಿಟ್ಲರ್ ಮರಕ್' ಎಂಬ ಅಭ್ಯರ್ಥಿಯನ್ನು ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಪೊಲೀಸ್ ಅಧೀಕ್ಷಕರು ಬಂಧಿಸಿದರು. ಪೊಲೀಸ್ ವರಿಷ್ಠಾಧಿಕಾರಿಯ ಹೆಸರೂ 'ಜಾನ್ ಎಫ್. ಕೆನಡಿ'. ಮರುದಿನ ಪತ್ರಿಕೆಯ ಮುಖ್ಯಾಂಶವೆಂದರೆ, 'ಜಾನ್ ಎಫ್. ಕೆನಡಿಯಿಂದ ಬಂಧಿತರಾದ ಅಡಾಲ್ಫ್ ಲು ಹಿಟ್ಲರ್'. ಹಿಟ್ಲರ್ ನಂತರ ಚುನಾವಣೆಯಲ್ಲಿ ಗೆದ್ದರು. ●ಈ ಸಲದ ಚುನಾವಣೆಯಲ್ಲಿ ಸುಮಾರು 97 ಕೋಟಿ ಮತದಾರರು ಮತದಾನ ಮಾಡಲು ಅರ್ಹತೆ ಪಡೆದಿದ್ದಾರೆ. ಈ ಉದ್ದೇಶಕ್ಕಾಗಿ 11.5 ಲಕ್ಷ ಮತಗಟ್ಟೆಗಳನ್ನು ಅಣಿಗೊಳಿಸಲಾಗಿದೆ. ಸುಮಾರು ಒಂದೂವರೆ ಕೋಟಿ ಮತಗಟ್ಟೆ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಯನ್ನು ಬಳಸಿಕೊಳ್ಳಲಾಗುತ್ತಿದೆ. ಸುಮಾರು 55 ಲಕ್ಷ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜತೆಗೆ ನಾಲ್ಕು ಲಕ್ಷ ವಾಹನಗಳನ್ನು ಸಹ ಬಳಸಿಕೊಳ್ಳಲಾಗುತ್ತಿದೆ. ●ಇಲ್ಲಿ ತನಕ ಚುನಾವಣಾ ಆಯೋಗ ಹದಿನೇಳು ಲೋಕಸಭೆ ಮತ್ತು ನಾಲ್ಕು ನೂರಕ್ಕೂ ಹೆಚ್ಚು ವಿಧಾನಸಭಾ ಚುನಾವಣೆಗಳನ್ನು ಸಮರ್ಥವಾಗಿ ಮಾಡಿದೆ.

ಭಿಡೆ ಬಿಡದಿದ್ದರೆ ಬದುಕೇ ಬಲುಭಾರ!

ಸಂಕೋಚವೆಂಬುದು ಕಳ್ಳಹೆಜ್ಜೆ ಹಾಕಿ ಮುಂದೆ ಬಂದು ನಿಂತಾಗ, ಸಂಕೋಚದಿಂದಲೇ ಅದನ್ನು ಬರಮಾಡಿಕೊಳ್ಳುತ್ತೇವಲ್ಲ ಅಲ್ಲಿಂದಲೇ ಶುರುವಾಗುತ್ತದೆ ಅದರ ಅವಾಂತರ. ಎದುರಿಗೆ ಬಂದಾಗ ಕೈಹಿಡಿದು ಒಳಮನೆಗೆ ಏಕೆ ಬಿಟ್ಟುಕೊಳ್ಳುತ್ತೇವೆಂದರೆ ಅದು ನಮಗೆ ಸಂಪನ್ನತೆಯ ಗುಣಶಾಹಿಯಾಗಿ ಕಾಣುತ್ತದೆ. ಈ ಸಂಕೋಚ ಒಳಹೊಕ್ಕು ಚಕ್ಕಳಮಕ್ಕಳ ಕುಳಿತುಬಿಟ್ಟರೆ ಅದರ ಪರಿತಪನೆಯ ಪ್ರಹಸನ ಆರಂಭವಾದಂತೆ.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vveditoped@gmail.com

ನಮ್ಮನ್ನು ಸಂಪೂರ್ಣ ಹತಾಹತಿಗೊಳಿಸಲು ನಮ್ಮೊಳಗಿರುವ ಒಂದು ಗುಣ ಸಾಕು. ಅದರಲ್ಲೂ ಆ ಗುಣ- ಸಂಕೋಚ ಎಂದಾದರೆ ಮುಗೀತು. ಕಾಣಾಕಾಣ ಒಬ್ಬನನ್ನು ಮುಗಿಸಲಿಕ್ಕೆ ಒಂದು ಸೌಟು ಸಂಕೋಚ ಸಾಕು. ಬೇಕಾದರೆ ನೋಡಿ ನಮ್ಮೆಲ್ಲ ಪರಿತಪನೆ, ಚಡಪಡಿಕೆ, ಕೊರಗು, ವೇದನೆ, ಹತಾಶೆ, ಖಜ್ಞಾಖೋರತನ, ಅಸಹಾಯಕತೆ, ವಿಷಾದ, ಅಲವತ್ತುಕೊಳ್ಳುವಿಕೆ, ಭಾವಭಂಗದ ಹಿಂದುಗಡೆ ಈ ಸಂಕೋಚವೆಂಬ ಹೆಮ್ಮಾರಿ ಕುಳಿತುಕೊಂಡಿದೆ. ತಮಾಷೆಯೆಂದರೆ ನಮಗ್ಯಾರಿಗೂ ಇದು ಹೆಮ್ಮಾರಿಯೆಂದು ಅನಿಸುವುದೇ ಇಲ್ಲ. ಅದಕ್ಕಿಂತ ಹೆಚ್ಚಾಗಿ ಈ ಸಂಕೋಚವನ್ನು ನಾವು 'ಸಂಪನ್ನಗುಣ' ಎಂದೇ ಭಾವಿಸಿದ್ದೇವೆ. 'ನೋಡು ಆಕೆ ಎಷ್ಟೊಂದು ಒಳ್ಳೆಯವಳು! ಅದೇನು ನಯ, ವಿನಯ? ಅದೇನು ಸಂಕೋಚ? ಅದೇನು ಒಳ್ಳೆಯ ನಡತೆ?' ಎಂದು ಪ್ರಶಂಸಿಸುತ್ತೇವೆ. ಸಂಕೋಚ ಪ್ರವೃತ್ತಿಯನ್ನು ನಮ್ಮ ಒಳ್ಳೆಯ ಗುಣಗಳ ಹರಿವಾಣದಲ್ಲಿಟ್ಟಿರುತ್ತೇವೆ.

ಆದರೆ ನಿಜಕ್ಕೂ ಈ ಸಂಕೋಚವೆಂಬುದು ನಾವಂದುಕೊಂಡಷ್ಟು ಒಳ್ಳೆಯ ಗುಣವಾ? ನಿಜಕ್ಕೂ ಇದು ಸಂಪನ್ನತೆಯಾ? ಸಂಕೋಚಕ್ಕೇಕೆ ಈ ಪರಿ ಮರ್ಯಾದೆ? ಸಂಕೋಚವೆಂಬುದು ಉತ್ತಮ ತನವಾ? ಈ ಪ್ರಶ್ನೆಗಳನ್ನಿಟ್ಟುಕೊಂಡು ಕುಳಿತರೆ ಈ ಗುಣದಿಂದ ಒಳ್ಳೆಯ ನಿದರ್ಶನಗಳು ಸಿಗುವುದಿಲ್ಲ. ಆದರೂ ನಾವು ಸಂಕೋಚವನ್ನು ಭಾವಕೋಶದಲ್ಲಿ ಭದ್ರವಾಗಿಟ್ಟುಕೊಂಡು ಕಾಲಕಾಲಕ್ಕೆ ಅದನ್ನಿಟ್ಟುಕೊಂಡಿದ್ದಕ್ಕೆ ನಮ್ಮೊಳಗೆ ಖುಷಿ, ಸಮಾಧಾನ ಅನುಭವಿಸುತ್ತಿರುತ್ತೇವೆ.

ಇನ್ನು ಕೆಲವರಿಗೆ ಸಂಕೋಚದ ದುಷ್ಪರಿಣಾಮಗಳೇನು ಎಂಬುದು ಗೊತ್ತು. ಹಾಗಂತ ಇವರು ಕೆಟ್ಟ ಗುಣಗಳ ಕಪಾಟಿನಲ್ಲಿ ಅದನ್ನು ಇಡಲು ಬಯಸುವುದಿಲ್ಲ. ಬನಿಯನ್ ಅಥವಾ ಪ್ಯಾಂಟಿನೊಳಗೆ ಹೊಕ್ಕ ಕೆಂಪಿರುವೆ ಎಂದಷ್ಟೇ ಭಾವಿಸಿರುತ್ತಾರೆ. ಇಂಥವರು ಸಂಕೋಚದ ಲಾಭವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಅದು ಬಿಟ್ಟರೆ ಅವರು ಸಂಕೋಚವನ್ನು ಬದಿಗೊತ್ತಿ ನೇರಾನೇರ. ಅವರ ಮನಸು ಏಕ್‌ದಂ ನೇರ.

ಸಂಕೋಚವೆಂಬುದು ಕಳ್ಳಹೆಜ್ಜೆ ಹಾಕಿ ಮುಂದೆ ಬಂದು ನಿಂತಾಗ, ಸುಮ್ಮಸುಮ್ಮನೆ ಕಳ್ಳನಗೆ ನಕ್ಕಾಗ ಸಂಕೋಚದಿಂದಲೇ ಅದನ್ನು ಬರಮಾಡಿಕೊಳ್ಳುತ್ತೇವಲ್ಲ ಅಲ್ಲಿಂದಲೇ ಶುರುವಾಗುತ್ತದೆ ಅದರ ಅವಾಂತರ. ಎದುರಿಗೆ ಬಂದಾಗ ಕೈಹಿಡಿದು ಒಳಮನೆಗೆ ಏಕಾಏಕಿ ಏಕೆ ಬಿಟ್ಟುಕೊಳ್ಳುತ್ತೇವೆಂದರೆ ಅದು ನಮಗೆ ಸಂಪನ್ನತೆಯ ಗುಣಶಾಹಿಯಾಗಿ ಕಾಣುತ್ತದೆ. ಹೀಗೆ ಮೆಲ್ಲಮೆಲ್ಲ ಈ ಸಂಕೋಚ ಎಂಬುದು ಒಳಹೊಕ್ಕು ಪಟಗಚ್ಚೆ ಹಾಕಿ ಚಕ್ಕಳಮಕ್ಕಳ ಕುಳಿತುಬಿಟ್ಟರೆ ಅದರ ಪರಿತಪನೆಯ ಪ್ರಹಸನ ಆರಂಭವಾದಂತೆ.

ಬೆಳಗಾಯಿತೆಂದರೆ ಸಾಕು, ಈ ಸಂಕೋಚವೆಂಬುದು ಎಲ್ಲಿ ಮಡಗಿಬಿದ್ದಿರುತ್ತೋ ಏನೋ ಥಟ್ಟನೆ ಬಂದು ಅಮರಿಕೊಳ್ಳುತ್ತದೆ. ಪೇಪರ್ ಓದುತ್ತಾ ಇರ್ತೇವೆ. ಪಕ್ಕದಲ್ಲೊಬ್ಬ ತಲೆ ಇಣುಕಿ ಇಣುಕಿ ಓದತೊಡಗುತ್ತಾನೆ. ಅಷ್ಟಕ್ಕೂ ಬಗ್ಗದಿದ್ದರೆ ನಮ್ಮ ಹೆಗಲ ಮೇಲೆ ಗಲ್ಲ ಇಟ್ಟು ಓದತೊಡಗುತ್ತಾನೆ. ಸರಿಯಾಗಿ ಕೂತ್ಕೊಳಯ್ಯ ಅಂತ ಹೇಳುವುದಿಲ್ಲ. ಅವನಿಗೇ ಪೇಪರ್ ಕೊಟ್ಟು ನಾವು ಸುಮ್ಮನಿರುತ್ತೇವೆ. ಅವನಿಗೆ ಬೇಸರವಾಗುತ್ತಲ್ಲ ಅಂತ ಹಾಗೂ ಮಾಡುತ್ತೇವೆ. ಉಪಾಹಾರಕ್ಕೆ ಕುಳಿತರೆ ತಾಟಿನಲ್ಲೂ ಸಂಕೋಚ ಬಂದು ಕುಳಿತಿರುತ್ತದೆ. ಐದಾದ ಮೇಲೊಂದು ದೋಸೆಯನ್ನು ತಿನ್ನಬೇಕೆಂದು ಮನಸ್ಸು ಹೇಳುತ್ತದೆ. ಬೇರೆಯವರು ಏನೆಂದುಕೊಳ್ಳುತ್ತಾರೋ, ಹೊಟ್ಟೆಬಾಕ, ಪಿಚಂಡಿಲ ಎನ್ನಬಹುದೇನೋ ಎಂಬ ಸಣ್ಣ ಸಂಕೋಚ. ಹೊಟ್ಟೆಯ ಆರ್ತನಾದವನ್ನು ಕೇಳಿಸಿಕೊಳ್ಳದೇ ಮೂರನೆ ದೋಸೆಯ ಕೊನೆಯಲ್ಲಿ ಮೇಲೆದ್ದು ಕೈತೊಳೆಯುತ್ತೇವೆ. ಕಚೇರಿಯಲ್ಲಿ ಬಾಸ್ ಮುಂದೆ ಕುಳಿತರೆ ಹೆಜ್ಜೆ ಹೆಜ್ಜೆಗೆ ಇದೇ ದಾಕ್ಷಿಣ್ಯ. ಬಾಸ್‌ನ ಅಂಗಿಗೂ ಕೋಟಿಗೂ ಮ್ಯಾಚ್ ಆಗುವುದಿಲ್ಲವೆಂಬುದು ಗೊತ್ತಿದ್ದೂ ಆತ 'ಹೇಗಿದೆ ಡ್ರೆಸ್ಸು' ಅಂತ ಕೇಳಿದರೆ 'ಬಹಳ ಚೆನ್ನಾಗಿದೆ... ಬಹಳ ಚೆನ್ನಾಗಿ ಕಾಣಿಸ್ತೀರಿ...' ಅಂತ ಅನಿಸಿಕೆ ಒಪ್ಪಿಸುತ್ತೇವೆ. 'ಚೆನ್ನಾಗಿ ಕಾಣಿಸುತ್ತಿಲ್ಲ, ಶುದ್ಧ ಪೆಕರನಂತೆ ಕಾಣಿಸುತ್ತೀರಿ' ಎಂದು ಹೇಳಲು ಧೈರ್ಯ ಸಾಕಾಗುವುದಿಲ್ಲ.

ಇದು ಕೇವಲ ನಮ್ಮ-ನಿಮ್ಮ ಪಾಡಲ್ಲ. ಮಹಾನ್ ವ್ಯಕ್ತಿಗಳಿಗೂ ಈ ಸಂಕೋಚ ಕಾಡುವುದುಂಟು. ಫ್ರಾಂಕ್ಲಿನ್ ರೂಸ್‌ವೆಲ್ಟ್ ಎಂಬ ಹೆಸರಿನ ಅಮೆರಿಕದ ಅಧ್ಯಕ್ಷನಿದ್ದ. ಆತ ಗಾಲಿಕುರ್ಚಿಯ ಮೇಲೆ ಚಲಿಸುತ್ತಿದ್ದ. ಪ್ರತಿನಿತ್ಯ ಅವನನ್ನು ನೂರಾರು ಮಂದಿ ಭೇಟಿ ಮಾಡುತ್ತಿದ್ದರು. ಅವರು ಹೋಗುವಾಗ ಗಾಲಿಕುರ್ಚಿಯಿಂದ ಮೇಲೆದ್ದು ಕೈಕುಲುಕಲು ಬಯಸುತ್ತಿದ್ದ. ಮೇಲೆದ್ದು ಷೇಕ್ ಹ್ಯಾಂಡ್ ಮಾಡದಿದ್ದರೆ ತನ್ನನ್ನು ತಪ್ಪಾಗಿ ಭಾವಿಸಬಹುದೆಂಬ ಸಂಕೋಚ ರೂಸ್‌ವೆಲ್ಟ್‌ನನ್ನು ಕಾಡುತ್ತಿತ್ತು. ಮೂರ್ನಾಲ್ಕು ಬಾರಿ ಗಾಲಿಕುರ್ಚಿಯಿಂದ ಮೇಲೇಳುವಾಗ ಬಿದ್ದುಬಿಟ್ಟಿದ್ದ. ಒಮ್ಮೆಯಂತೂ ಮೂಗು ಜಜ್ಜಿ ರಕ್ತ ಬಂದಿತ್ತು. ಈ ಸಂಕೋಚ ರೂಸ್‌ವೆಲ್ಟ್‌ನನ್ನು ತಿಂಗಳಾನುಗಟ್ಟಲೆ ಮಲಗಿಸಿಬಿಟ್ಟಿತ್ತು. ಆದರೂ ಅವನು ಸುಮ್ಮನಿರುತ್ತಿರಲಿಲ್ಲ. ಹಾಗಂತ ಆತನೇ ಬರೆದುಕೊಂಡಿದ್ದಾನೆ.



ಯೋಗಿತಾ ಬಾಲಿ ಎಂಬ ಹಿಂದಿ ತಾರೆಯಿದ್ದಳು. ಎಪ್ಪತ್ತರ ದಶಕದಲ್ಲಿ ಪದಿಹರೆಯದ ಯುವಕರಲ್ಲಿ ರಾತ್ರಿಗಳನ್ನು ಸಪ್ನಮಯವಾಗಿ ಉಳಿಸುತ್ತಿದ್ದ ನಟಿ. ಗಂಗಾ ತೇರಾ ಪಾನಿ ಅಮೃತ್, ನರತ್, ಧರ್ಮ್‌ಕಿ, ಮೃಗತೃಷ್ಣಾ, ಖ್ವಾಬ್, ಜಾನ್‌ವರ್, ಬೇಶಕ್ ಮುಂತಾದ ಚಿತ್ರಗಳಲ್ಲಿನ ಆಕೆಯ ಅಭಿನಯವನ್ನು ಮರೆಯಲು ಸಾಧ್ಯವೇ ಇಲ್ಲ. ಯೋಗಿತಾ ಬಾಲಿಗೆ ಮೊದಲಿಂದಲೂ ಕಿಶೋರ್‌ಕುಮಾರ್ ಅಂದ್ರೆ, ಅವನ ಹಾಡುಗಳೆಂದರೆ ಪಂಚಪ್ರಾಣ. ಕಿಶೋರ್ ಜತೆ ಸಲುಗೆ ಮೂಡಿತು. ಆದರೆ ಆಕೆಗೆ ಆತನನ್ನು ಮದುವೆಯಾಗಲು ಮನಸ್ಸಿರಲಿಲ್ಲ. ಆಗಲೇ ಆತನ ಎರಡು ಮದುವೆಗಳು ಮುರಿದು ಬಿದ್ದಿದ್ದವು. ಒಂದು ದಿನ ಕಿಶೋರ್ ಆಕೆಯ ಮುಂದೆ 'ಮದುವೆಯಾಗೋಣ' ಅಂದ. ಹಾಳಾದ್ದು ಸಂಕೋಚ ಮೂಗು ತೂರಿಸಿತು. 'ಮದ್ವೆಗಿದ್ವೆ ಬೇಡ. ಹೀಗೇ ಸ್ನೇಹಿತರಾಗಿರೋಣ' ಅಂತ ಹೇಳಿದ್ದರೆ ಅಲ್ಲಿಗೆ ಮುಗಿದು ಹೋಗ್ತಿತ್ತು. ಕಿಶೋರ್ ಆಕೆಯ ಹಿಂದೆ ಬಿದ್ದ. ಪದೇ ಪದೆ ಮದ್ವೆ ಎಂದ. ಯೋಗಿತಾಗೆ ಗಂಟಲಿನ ಮಾತು ಬಾಯಿಗೆ ಬರಲಿಲ್ಲ. ಒಲ್ಲದ ಮನಸ್ಸಿನಿಂದ ಹಸೆಮಣೆ ಏರಿದಳು. ಕೊನೆಗೆ ಪಡಬಾರದ ಕಷ್ಟ ಅನುಭವಿಸಿದಳು. ಕಿಶೋರ್ ಜತೆ ಬಾಳ್ವೆ ಮಾಡಲು ಆಗಲಿಲ್ಲ. ಮದುವೆ ಅಸಹನೀಯವಾಯಿತು. ಕೊನೆಗೆ ವಿಚ್ಛೇದನ ಕೊಟ್ಟು ಹೊರನಡೆದು ಬಂದಳು. ಒಂದು ಸಂಕೋಚ ಬದುಕಿನಲ್ಲಿ ರಂಬಾರೂಡಿ ಎಬ್ಬಿಸಿಬಿಟ್ಟಿತು.

ಯಾವನೋ ಸ್ನೇಹಿತ ಬಂದು ಹಣ ಕೇಳುತ್ತಾನೆ. ನಮ್ಮ ಹತ್ರಾನೇ ದುಡ್ಡು ಇರೊಲ್ಲ. ಆದರೂ ಹಾಗಂತ ಹೇಳುವುದಿಲ್ಲ. ಬೇರೆಯವರ ಹತ್ತಿರ ಸಾಲ ಮಾಡಿ ತಂದು ಕೊಡುತ್ತೇವೆ. ಸ್ನೇಹಿತ ಹೇಳಿದ ದಿನಕ್ಕೆ ಹಣ ವಾಪಸ್ ಕೊಡುವುದಿಲ್ಲ. ನಾವು ಯಾರಿಂದ ಹಣ ತಂದಿರುತ್ತೇವೋ ಆತ ವಾಪಸ್ ಕೊಡುವಂತೆ ಪೀಡಿಸುತ್ತಾನೆ. ಆದರೂ ಸ್ನೇಹಿತನಲ್ಲಿ ಹೋಗಿ ಹಣ ಕೇಳುವುದಕ್ಕೆ ಸಂಕೋಚ. ಹಣ ವಾಪಸು ಕೊಡು ಅಂತ ಹೇಳಿದರೆ ಆತ ಬೇಸರಿಸಿಕೊಂಡರೆ, ಸಂಬಂಧ ಹಾಳಾದರೆ ಅಂತ ಯೋಚಿಸುತ್ತೇವೆಯೇ ಹೊರತು, ಕೊಟ್ಟ ಹಣ ಕೊಡು ಅಂತ ಖಡಾಖಂಡಿತವಾಗಿ ಹೇಳುವುದಿಲ್ಲ. ಈ ಸಂಕೋಚ ಬಂದು ಬಾಯನ್ನೇ ಮುಚ್ಚಿಹಾಕಿದರೂ ಸುಮ್ಮನಿರುತ್ತೇವೆ. ಅದರಿಂದ ಬರುವ ಎಲ್ಲ ತೊಂದರೆಗಳನ್ನು ಅನುಭವಿಸುತ್ತೇವೆ. ಆದರೂ ಗಪ್ಪಂತ ಕುಳಿತಿರುತ್ತೇವೆ. ದುಡ್ಡು ವಾಪಸ್ ಬಂದಿಲ್ಲ ಎಂದು ಕೊನೆತನಕ ಕದಕದಿಸುತ್ತೇವೆಯೇ ಹೊರತು ಕೇಳಲು ಮುಂದಾಗುವುದೇ ಇಲ್ಲ.

ಈ ಸಂಕೋಚ ಒಮ್ಮೆ ಹೊಕ್ಕಿತೆಂದರೆ ಸಾಕು. ಹೊರಗೆ ಬರುವುದೇ ಇಲ್ಲ. ಶ್ರೀಲಂಕಾ ಮೂಲದ ಕುಮಾರನ್ ಸನಂತರಿಯಾ ಬರೆದ ಕತೆಯನ್ನು ಹೇಳಬೇಕು. ಕತೆ ಹೆಸರೇ ಸಂಕೋಚ ಎಂಬ ಪೀಡೆ. ಅದೊಂದು ದೊಡ್ಡ ಮನೆ, ಶ್ರೀಮಂತ ಕುಟುಂಬ. ಅಪ್ಪ-ಅಮ್ಮಂದಿರಿಗೆ ಒಬ್ಬನೇ ಮಗ. ಅವನಿಗೊಬ್ಬಳು ಸುಂದರ ಹೆಂಡತಿ. ಮಗನಿಗೆ ವಿಪರೀತ ಕೆಲಸ. ಅಪ್ಪನ ಆಸ್ತಿಗೆ ಒಬ್ಬನೇ ವಾರಸುದಾರ. ಹೀಗಾಗಿ ತಿಂಗಳಲ್ಲಿ ಇಪ್ಪತ್ತು ಇಪ್ಪತ್ತೈದು ದಿನ ಊರೂರು ಸುತ್ತಾಟ. ಈ ಮಧ್ಯೆ ಮಾವನಿಗೆ ಸೊಸೆಯ ಮೇಲೆ ಕಣ್ಣು ಬಿತ್ತು. ಮಗ ಇಲ್ಲದ ಸಮಯದಲ್ಲಿ ಸೊಸೆಯನ್ನು ಏಕಾಂತಕ್ಕೆ ಕರೆಯತೊಡಗಿದ. ಸೊಸೆಗೆ ಸಂಕೋಚ. ಮಾವನೋ ಅತಿ ಶ್ರೀಮಂತ. ನಾಡಿಗೇ ಹೆಸರಾಂತ, ಪ್ರಭಾವಿ ವ್ಯಕ್ತಿ. ಇಂಥವನಿಗೆ ಹೇಗೆ ಎದುರಾಡಬೇಕೆಂಬ ದುಗುಡ. ಮಾವನ ಕಾಟ ಅತಿಯಾಯಿತು. ಸೊಸೆಗೆ ಅತೀವ ವೇದನೆ, ಸಂಕಟ. ಹಾಗೆಂದು ಇದನ್ನು ಗಂಡನ ಮುಂದಾಗಲಿ, ಅತ್ತೆಯ ಮುಂದಾಗಲಿ ಹೇಳುವಂತಿಲ್ಲ. ಹೇಳದಿದ್ದರೆ ಅರ್ಥವಾಗುವುದಿಲ್ಲ. ಮಾವನಿಗೆ ತಿರಸ್ಕಾರ ತೋರುವಂತಿಲ್ಲ. ಎಲ್ಲೆಡೆಯಿಂದಲೂ ಸಂಕೋಚ ಸುತ್ತುವರಿದಿತ್ತು. ಇಷ್ಟೆಲ್ಲ ಸಂಕಟ ಅನುಭವಿಸುವ ಬದಲು ಮಾವನಿಗೆ ಖಂಡತುಂಡಾಗಿ 'ಒಲ್ಲೆ' ಎಂದರೆ ಅವಳ ಸಮಸ್ಯೆ ಇತ್ಯರ್ಥವಾಗುತ್ತಿತ್ತು. ಹಾಗೆ ಹೇಳಲು ಅವಳಿಗೆ ಒಳ್ಳೆಯತನದ ಬಡಿವಾರ ಕಾಡುತ್ತಿತ್ತು. ಒಳ್ಳೆಯತನವೇ ಸಂಕೋಚವೆಂದು ಅವಳು ಭಾವಿಸಿದ್ದಳು. ಈ ಕತೆ ಅಂತ್ಯ ಇಲ್ಲಿ ಮುಖ್ಯ ಅಲ್ಲ. ಒಂದು ಸಣ್ಣ ಸಂಕೋಚ ಅವಳನ್ನು ಯಾವ ಪರಿ ಕಾಡುತ್ತದೆಂಬುದನ್ನು ಕತೆಗಾರ ಸೊಗಸಾಗಿ ಹೇಳುತ್ತಾನೆ.

ಬಾಸ್ ಹೇಳುವ ಕೆಟ್ಟ ಜೋಕಿಗೆ ನಗುವಾಗ, ಮನಸ್ಸಿಲ್ಲದಿದ್ದರೂ ಗೆಳೆಯನ ಜತೆ ಸುತ್ತುವಾಗ, ಮೇಲಧಿಕಾರಿಯನ್ನು ಮೆಚ್ಚಿಸುವುದಕ್ಕಾಗಿ ಆಫೀಸಿನ ಫೈಲುಗಳೆಲ್ಲವನ್ನು ಮನೆಗೆ ತಂದು ನೋಡುತ್ತಾ ಹೆಂಡತಿಯಿಂದ ಉಗಿಸಿಕೊಳ್ಳುವಾಗ, ಒಲ್ಲದ ಗೆಳೆತನಕ್ಕೆ ಸಿಕ್ಕು ವೃಥಾ ಕಾಲಹರಣ ಮಾಡುವಾಗ, ಮನೆಯಲ್ಲಿ ಬೈಸಿಕೊಳ್ಳುವುದು ಗ್ಯಾರಂಟಿಯಾದಾಗಲೂ ಮನಸ್ಸಿಲ್ಲದ ಮನಸ್ಸಿನಿಂದ ಸ್ನೇಹಿತನ ಜತೆ ಸುತ್ತುವಾಗ, ಖಾರ ತಿನ್ನುವುದು ಅಸಾಧ್ಯವಾದರೂ ಬೇರೆಯವರಿಂದ ಹೊಗಳಿಸಿಕೊಳ್ಳಲು ಅತಿ ಖಾರ ತಿಂದು ಬಾಯಿ ಉರಿಸಿಕೊಳ್ಳುವಾಗ, ಪ್ರಿಯಕರನ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಒಟ್ಟಾದ ಗುಟ್ಟು ರಟ್ಟಾದಾಗ, ಜೋಪಾನವಾಗಿ ಸಲಹಿದ ಕಾರನ್ನು ಒಂದೆರಡು ದಿನಗಳ ಮಾತಿಗೆ ಸ್ನೇಹಿತ ಕೇಳಿದಾಗ, ಅನೇಕ ವರ್ಷಗಳಿಂದ ಪ್ರೀತಿಯಿಂದ ಕಾಯ್ದುಕೊಂಡು ಬಂದ ಪುಸ್ತಕಗಳಿಗೆ ಸ್ನೇಹಿತರು ಕೈಹಾಕಿ ತೆಗೆದುಕೊಂಡು ಹೋಗುವಾಗ, ವಾರದ ಮಟ್ಟಿಗೆ ಕ್ಯಾಮೆರಾ ಬೇಕೆಂದು ಗೆಳೆಯ ವರಾತಕ್ಕೆ ಬೀಳುವಾಗ ಈ ಸಂಕೋಚವೆಂಬುದು ಪೀಡೆಯಾಗಿ ಗೋಚರಿಸುತ್ತದೆ. ಆದರೆ ಅನೇಕರಿಗೆ ತಮ್ಮ ಒಳ್ಳೆಯತನಕ್ಕೆ ಎಲ್ಲಿ ಧಕ್ಕೆ ಬರುವುದೋ ಎಂಬ ಆತಂಕ. ಇಂಥವರಿಗೆ ನೇರವಾಗಿದ್ದರೆ, straight forward ಇದ್ದರೆ ಕೆಟ್ಟವರೆಂದು ಇತರರು ಭಾವಿಸುತ್ತಾರೆಂಬ ಪುಕಪುಕಿ. ಈ ಸಂಕೋಚ ತಮಗೆ ಮುಳುವಾಗುತ್ತದೆ ಎಂಬುದನ್ನು ಮರೆಯುತ್ತಾರೆ. ಸಂಕೋಚ ಎಂಬ ಬಲಹೀನತೆ ಎಂದಿಗೂ ನಮಗೆ ಒಳ್ಳೆಯದಲ್ಲ ಎಂಬ ಸಾಮಾನ್ಯ ಸಂಗತಿಯೂ ಅವರ ಗಮನಕ್ಕೆ ಬರುವುದಿಲ್ಲ.

ಈ ಸಂಕೋಚ ಇದೆಯಲ್ಲ ಅದು ನಿಮಗೆ ತಿನ್ನಬೇಕೆಂದು ಅನಿಸಿದಾಗ ತಿನ್ನಲು ಹೇಗೆ ಬಿಡುವುದಿಲ್ಲವೋ, ತಿನ್ನಲು ಆಗದಿದ್ದಾಗ ಬೇಕಾಬಿಟ್ಟಿ ತಿನ್ನುವಂತೆ ಮಾಡುತ್ತದೆ. ಬಾಸ್ ಮನೆಗೆ ಊಟಕ್ಕೆ ಹೋದರೆ ಇಷ್ಟವಿಲ್ಲದಿದ್ದರೂ ತಿನ್ನಬೇಕಾಗುತ್ತದೆ. ಬಾಸ್‌ನ ಒತ್ತಾಯಕ್ಕೆ, ಆತನ ಹೆಂಡತಿಯನ್ನು ಮೆಚ್ಚಿಸಲು ತಿಂದು ಹೊಟ್ಟೆ, ಆರೋಗ್ಯ ಕೆಡಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಬಾಸ್‌ನ ಮೆಚ್ಚಿಸಲು ಆತನ ನಾಯಿ, ಬೆಕ್ಕನ್ನು ಒತ್ತಾಯಕ್ಕೆ ಪ್ರೀತಿಸುತ್ತಾರೆ. ತಮ್ಮ ಮನೆಯಲ್ಲಿ ನಾಯಿಯನ್ನು ಎಂದೂ ಹೊರಗೆ ಕರೆದುಕೊಂಡು ಹೋಗದವರು, ಬಾಸ್‌ನ ನಾಯಿಯನ್ನು ಒಂದು ರೌಂಡು ಹೊಡೆಸುತ್ತಾರೆ. ಬಾಸ್‌ಗೆ ಕೆಂಪು ಇಷ್ಟವಾದರೆ ಇವರಿಗೂ ಅದೇ ಇಷ್ಟ. ಆತನಿಗೆ ಪಿಜ್ಜಾ ಇಷ್ಟವಾದರೆ ಇವರಿಗೂ ಅದೇ ಬೇಕು, ರಬ್ಬರ್ ಜಗಿದಂತೆ ಎಂದೆನಿಸಿದರೂ ಪರವಾಗಿಲ್ಲ. ಕೆಲವು ಸಲ ನಮಗೆ ಸುತರಾಂ ಇಷ್ಟವಿರುವುದಿಲ್ಲ. ಆದರೂ ಬಹಳ ಇಷ್ಟವಿರುವಂತೆ ನಟಿಸುತ್ತೇವೆ. ಈ ಹಾಳು ಸಂಕೋಚದ ಸಹವಾಸ!

ಯಾವುದಾದರೂ ಸಂಗತಿ ಹಿಡಿಸದಿದ್ದರೆ, ಇಷ್ಟವಾಗದಿದ್ದರೆ ಒಂದೇ ಪಾಟಿಗೆ ಇಲ್ಲ, ಸಲ್ಲ, ಒಲ್ಲೆ, ಆಗದು ಎಂದು ಹೇಳಿಬಿಟ್ಟರೆ, ಸಂಕೋಚವನ್ನು ನಾಯಿಮರಿಯಂತೆ ಕುತ್ತಿಗೆ ಹಿಡಿದು ಹೊರಗಿಟ್ಟರೆ ಆ ಕ್ಷಣಕ್ಕೆ ಕಿರಿಕಿರಿಯಾದರೂ ಅನಂತರ ಯಾವತ್ತೂ ನೆಮ್ಮದಿಯಿಂದ ಇರಬಹುದು. ಎರಡನೆ ಮಹಾಯುದ್ಧದಲ್ಲಿ ಅಮೆರಿಕದ ಅಧ್ಯಕ್ಷ ಹ್ಯಾರಿ ಟ್ರೂಮನ್‌ಗೆ, ತುರ್ತುಸ್ಥಿತಿ ಸಂದರ್ಭದಲ್ಲಿ ಇಂದಿರಾ ಗಾಂಧಿಯನ್ನು ಒಪ್ಪಿಕೊಂಡ ಆಕೆಯ ಬೆಂಬಲಿಗರಿಗೆ, ಮುಷರಫ್‌ನಂಥ, ಸದ್ದಾಂನಂಥ, ಜಾರ್ಜ್ ಬುಷ್‌ನಂಥವರನ್ನು ಯಾವತ್ತೂ ಒಪ್ಪಿಕೊಳ್ಳಬೇಕಾದ ಅನಿವಾರ್ಯತೆಯಿರುವ ಅವರ ನಿಕಟವರ್ತಿಗಳಿಗೆ, ನಮ್ಮ ನಿಮ್ಮೆಲ್ಲರನ್ನು ನಿತ್ಯವೂ ಸಹಿಸಿಕೊಳ್ಳಬೇಕಾಗಿರುವ ಹೆಂಡತಿಯರಿಗೆ ಹಾಗೂ ಗಂಡಂದಿರಿಗೆ ಅಡಿಗಡಿಗೆ ಎದುರಾಗುವುದು ಈ ಸಂಕೋಚವೆಂಬ ಬನಿಯನ್ ಒಳಗಿನ ಕೆಂಪಿರುವೆ!

ಏನೇ ಹೇಳಿ ಸಂಕೋಚ ನಾವಂದುಕೊಂಡಷ್ಟು ಒಳ್ಳೆಯದಲ್ಲ!

ಇದು ತಮಾಷೆಯ ಮಾತಲ್ಲ, ಅಧಿಕೃತ!

ವಿದೇಶಗಳಿಂದ ಶೀಘ್ರವಾಗಿ ಹಣವೆತ್ತಬಲ್ಲ ಜಾಣ್ಮೆ ಇರುವಂಥವರನ್ನೇ ಪಾಕಿಸ್ತಾನದಲ್ಲಿ ವಿದೇಶಾಂಗ ಸಚಿವರನ್ನಾಗಿ ಮಾಡಲಾಗುತ್ತದೆ. ಅಮೆರಿಕದ ಹಬೀಬಿ ಬ್ಯಾಂಕಿನ ನಿರ್ವಹಣೆಯನ್ನು ಸೂಕ್ತವಾಗಿ ಮಾಡದೆ ಕಾಳಧನ ಮಾಡುವುದರಲ್ಲಿ ಕುಖ್ಯಾತಿ ಪಡೆದಾತ ಅಲ್ಲಿನ ಅರ್ಥಸಚಿವ.

ವಿದ್ಯಮಾನ
ಅನುಪಮಾ ಬೆಟ್ಟದಪುರ
vveditoped@gmail.com

ದಿನ ಬೆಳಗಾದರೆ ಬಾಂಬ್ ಸ್ಫೋಟಿಸಿ, ಬೇರೆಯವರ ನೋವಲ್ಲಿ ನಲಿದಾಡುತ್ತಿದ್ದ ಪಾಕಿಸ್ತಾನ ಈಗ ತಿರುಪೆ ಎತ್ತುವ ಸ್ಥಿತಿಗೆ ತಲುಪಿದೆ. ನಮ್ಮ 'ಕಾಮಿಡಿ ಸರ್ಕಸ್'ನಲ್ಲಿ ಆಗುವುದಕ್ಕಿಂತ ಹೆಚ್ಚು ಮೋಜು, ನಗೆಚಟಾಕಿಗಳ ಸಾಲುಸಾಲು ಪ್ರಸಂಗಗಳ ಸುದ್ದಿಗಳು ಪಾಕಿಸ್ತಾನದಿಂದ ಬಿತ್ತರವಾಗುತ್ತಿವೆ. ದಿನಕ್ಕೊಂದು ಚಿಂದಿ ಕಥೆ. ಇದರಿಂದಾಗಿ ಭಾರತದ ಕಾಮಿಡಿ ಷೋಗಳ ಟಿಆರ್‌ಪಿ ಕುಸಿಯುವ ಎಲ್ಲಾ ಲಕ್ಷಣಗಳಿವೆ.

ತೀರಾ ಪ್ರಯಾಸದಿಂದ ಚುನಾವಣೆಯನ್ನು ನಡೆಸಿ ಶೆಹಬಾಜ್ ಷರೀಫ್‌ರನ್ನು ಪ್ರಧಾನಿಯನ್ನಾಗಿ ಮಾಡಿದೆ ಪಾಕಿಸ್ತಾನ. ಎಲ್ಲಾ ದೇಶಗಳಲ್ಲಿ ಪ್ರಧಾನಿಯಾಗುವುದೆಂದರೆ ಹೆಮ್ಮೆ ಮತ್ತು ಗೌರವದ ಸಂಗತಿಯೇ. ಆದರೆ ಪಾಕಿಸ್ತಾನದಲ್ಲಿ ಪ್ರಧಾನಿಯಾದವರಿಗೆ ಇಂಥ ಸ್ಥಿತಿ ದಕ್ಕುವುದು ಕೊಂಚ ದುಸ್ತರವೇ. ಅಲ್ಲಿ ಪ್ರಧಾನಿ ಹುದ್ದೆಗೆ ಏರುವವರನ್ನು ಕಂಡಾಗ 'ಅಯ್ಯೋ ಪಾಪ' ಎನಿಸುತ್ತದೆ. ದಿವಾಳಿಯ ಹಂತಕ್ಕೆ ಬಂದು ನಿಂತಿರುವ ದೇಶವೊಂದರ ನೇತೃತ್ವ ವಹಿಸಲು ಮುಂದೆ ಬಂದವರನ್ನು ಕಂಡಾಗ ಹೀಗೆನಿಸುವುದು ಸಹಜವೇ.

ಪಾಕಿಸ್ತಾನದಲ್ಲಿ ಪ್ರಧಾನಿ ಪಟ್ಟ ಅಲಂಕರಿಸಿದವರಿಗೆ ಸ್ವತಂತ್ರವಾಗಿ ಯಾವುದೇ ನಿಲುವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ; ಸೇನೆ ಹೇಳಿದಂತೆ ಕುತ್ತಿಗೆಯನ್ನು ಆಡಿಸಿದರಷ್ಟೇ ಆತ ಪ್ರಧಾನಿಯಾಗಿ ಮುಂದುವರಿಯಬಹುದು ಮತ್ತು ಬದುಕಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಸೇನೆ ಹೇಳಿದಾಗ ಸೂಟುಬೂಟು ಧರಿಸಿ, 'ಯಾಕೆ? ಏನು?' ಎಂದು ಕೇಳದೆ, ವಿಶ್ವದ ಮುಂದೆ ಭಿಕ್ಷೆ ಬೇಡಲು ತೆರಳಬೇಕು. ಇಲ್ಲದಿದ್ದರೆ ಅವನನ್ನು ಗುಂಡಿಟ್ಟು ಕೊಲ್ಲುವುದೋ, ಸೆರೆಮನೆಗೆ ತಳ್ಳುವುದೋ ಪಾಕಿಸ್ತಾನದಲ್ಲಿ ನಡೆದುಬಂದಿರುವ ಸಂಪ್ರದಾಯ!

ಪಾಕಿಸ್ತಾನಕ್ಕೆ ಈಗ ಎಲ್ಲಾ ಸಂಕಟಗಳು ಒಟ್ಟೊಟ್ಟಿಗೆ ಬಂದೆರಗುತ್ತಿವೆ. ನಮ್ಮಲ್ಲಿರುವ ಎಲ್ಲ ದೇವ-ದೇವತೆಗಳು ಅವರನ್ನು ಸಾಮೂಹಿಕವಾಗಿ ಶಪಿಸಿರುವಂತೆ ಅದು ವಿಲವಿಲ ಒದ್ದಾಡುತ್ತಿದೆ. ಅಲ್ಲಿನ ಜನಕ್ಕೆ ತಿನ್ನಲು ಹಿಟ್ಟಿಲ್ಲ ಅನ್ನೋದು ಹಳೆಯ ಕಥೆ. ಇದೀಗ ಕಾಶ್ಮೀರದಲ್ಲಿ ರಾವಿ ನದಿಗೆ ಸೇತುವೆ ಕಟ್ಟಿದ ನಂತರ ನೀರಿಗೂ ಹಾಹಾಕಾರವೆದ್ದಿದೆ. ಅದರೊಟ್ಟಿಗೆ ಆಫ್ಘನ್, ಬಲೂಚ್‌ಗಳಿಂದ ರಾಕೆಟ್‌ಗಳು ಎರಗಿ ಬೀಳುತ್ತಿವೆ. ಯಾವ ಸಮಸ್ಯೆಯನ್ನು ಮೊದಲು ಎದುರಿಸಬೇಕೆಂಬ ಗೊಂದಲ ಈಗ ಪಾಕಿಸ್ತಾನಕ್ಕೆ. ಅವರ ಜನಸಂಖ್ಯಾ ಸ್ಫೋಟವನ್ನಂತೂ ಕೇಳಲೇ ಬೇಡಿ. ಮಾಡಲು ಯಾವ ಕೆಲಸವಿಲ್ಲದಿದ್ದರೂ ಅಲ್ಲಿ ಮಕ್ಕಳನ್ನು ಯಥೇಚ್ಛವಾಗಿ ಹೆರಲು ಯಾವುದೇ ಸಮಸ್ಯೆಯಿಲ್ಲ. ವಿಶ್ವದಲ್ಲೇ ಅತಿಹೆಚ್ಚಿನ ಜನನ ಪ್ರಮಾಣ ಅಫ್ಘಾನಿಸ್ತಾನದಲ್ಲಿ ದಾಖಲಾದರೆ, ನಂತರದ ಸ್ಥಾನ ಪಾಕಿಸ್ತಾನದ್ದು. ಜನಸಂಖ್ಯಾ ಸ್ಫೋಟದಿಂದ ಅಲ್ಲಿ ಉತ್ತಮ ತಳಿಗಳ ಉತ್ಪಾದನೆಯಾಗುತ್ತಿದೆಯಾ ಎಂದರೆ ಅದೂ ಇಲ್ಲ, ಇದಕ್ಕೆ ಇಂಬುಕೊಟ್ಟಂತೆ, ಪಾಕಿಸ್ತಾನದಲ್ಲಿ ಅಣ್ಣ-ತಮ್ಮಂದಿರು, ದಾಯಾದಿ, ಚಿಕ್ಕಪ್ಪ-ದೊಡ್ಡಪ್ಪ ಎಂಬ ಭೇದವಿಲ್ಲದೆ ಎಲ್ಲರೊಂದಿಗಿನ ವಿವಾಹ ಹಾಗೂ ಸಂಬಂಧದಿಂದ ಹುಟ್ಟಿರುವ ಮಕ್ಕಳಿಗೆ ಆನುವಂಶಿಕ ರೋಗಗಳು ಹೆಚ್ಚುತ್ತಿವೆ. ಹುಟ್ಟುವ ಮಕ್ಕಳಲ್ಲಿ ಏನಾದರೊಂದು ಕುಂದುಕೊರತೆ ಇದ್ದೇ ಇರುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ. ಹಿಂದಿನ ಪೀಳಿಗೆಯ ಪಾಕಿಸ್ತಾನೀಯರು 6 ಅಡಿಗೂ ಹೆಚ್ಚು ಎತ್ತರವಿದ್ದು ದೃಢಕಾಯರಾಗಿರುತ್ತಿದ್ದುದನ್ನು ನೆನಪಿಸಿಕೊಳ್ಳಬಹುದು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಪಾಕಿಸ್ತಾನದಲ್ಲಿ ಗರ್ಭಿಣಿಯರು ಪೌಷ್ಟಿಕಾಂಶಗಳ ಕೊರತೆಯಿಂದ ಬಳಲುತ್ತಿದ್ದಾರೆ. ಆದ್ದರಿಂದ ಆರೋಗ್ಯವಂತ ಮಕ್ಕಳು ಹುಟ್ಟುತ್ತಿಲ್ಲ. ಇನ್ನು ಮಹಿಳೆಯರು ಮಕ್ಕಳನ್ನು ಹೆರುವ ಯಂತ್ರಗಳಾಗಿರುವುದರ ಬಗ್ಗೆ ಮಾತನಾಡದಿರುವುದೇ ಸೂಕ್ತ.



ಇನ್ನು, ಹುಟ್ಟಿದ ಸರಾಸರಿ ಮಕ್ಕಳಲ್ಲಿ ಹಲವರು 5-6ನೇ ತರಗತಿಯವರೆಗೆ ಓದಿ ದಡಸೇರಿದರೆ ಹೆಚ್ಚು, ಬಡತನದಿಂದಾಗಿ ಶಾಲೆಯನ್ನು ಬಿಡಿಸುವುದು ಅಲ್ಲಿ ಸಾಮಾನ್ಯ. ಇನ್ನು ಓದಲು ಶಕ್ತರಿರುವ ಮಕ್ಕಳಾದರೂ ಜಗತ್ತಿನ ವೇಗಕ್ಕೆ ಅನುಗುಣವಾಗಿ ಬೆಳೆಯುತ್ತಿರುವ ತಂತ್ರಜ್ಞಾನಗಳಿಗೆ, ಕೃತಕ ಬುದ್ಧಿಮತ್ತೆಯಲ್ಲಿ ಆಗುತ್ತಿರುವ ಕ್ಷಿಪ್ರ ಕ್ರಾಂತಿಗಳಿಗೆ ಅವರು ಅಪ್‌ಡೇಟ್ ಆಗುತ್ತಿಲ್ಲ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ, ಇತರ ಮುಂದುವರಿದ ದೇಶಗಳ ವಿದ್ಯಾರ್ಥಿಗಳ ಸಮಕ್ಕೆ ಬರಲು ಅವರಿಗೆ ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಅದನ್ನು ಎದುರಿಸಿ ಬೆಳೆದರೂ, ಚಿಕ್ಕ ವಯಸ್ಸಿನಿಂದಲೂ ಬಾವಿಯೊಳಗಿನ ಕಪ್ಪೆಯಂತೆ ಬೆಳೆಸಿದ ಕಾರಣಕ್ಕೆ ಮತ್ತು ಉಣಬಡಿಸಿದ ಭಾರತ-ದ್ವೇಷದ ವಿಷದಿಂದಾಗಿ ಎಲ್ಲರೊಂದಿಗೆ ಹೊಂದಿಕೊಳ್ಳಲು ಅವರಿಗೆ ಕಷ್ಟ. ಗರ್ಭಿಣಿಯರು ನಿರಂತರ ಕೋಪ, ದ್ವೇಷ, ಭೀಭತ್ಸದ ವರ್ತನೆಗಳನ್ನೇ ಕಂಡು ದ್ವೇಷದ ದಳ್ಳುರಿಯಲ್ಲಿ ಮಕ್ಕಳನ್ನು ಹೊತ್ತಾಗ, ಹುಟ್ಟುವ ಮಕ್ಕಳಲ್ಲೂ ಕಾಣಬರುವುದು ದ್ವೇಷವೇ. ಆ ದ್ವೇಷ ಯಾರ ಕಡೆಗೆ ಎಂಬುದು ನಂತರ ಬರುವ ಪ್ರಶ್ನೆ. ಹಾಗಾಗಿ ಅಲ್ಲಿನ ಬಹುತೇಕ ಜನರಲ್ಲಿ ಭಾರತದ ಬಗ್ಗೆ ಅತೀವ ದ್ವೇಷವಿದೆ.

ಇವೆಲ್ಲದರಿಂದಾಗಿ ಜಗತ್ತಿನ ಯಾವ ದೇಶಕ್ಕೂ ಬಾರದ ದುಸ್ಥಿತಿ ಈಗ ಪಾಕಿಸ್ತಾನಕ್ಕೆ ಬಂದಿದೆ. ಒಂದು ಸಮೀಕ್ಷೆಯ ಪ್ರಕಾರ, ಪಾಕಿಸ್ತಾನದ ಪ್ರತಿ 6ನೇ ವ್ಯಕ್ತಿಯು 'ವೃತ್ತಿಪರ ಭಿಕ್ಷುಕ' ಎಂದರೆ ದಿಗ್ಭ್ರಮೆಯಾಗುತ್ತದೆ. ಇದೀಗ ಅಲ್ಲಿನ ಭಿಕ್ಷುಕರ ಸಂಖ್ಯೆ 8 ಮಿಲಿಯನ್ ದಾಟಿದೆ. ಅಲ್ಲಿನ ಕೆಲವೊಂದು ನಗರಗಳ ಬೀದಿಬೀದಿಗಳಲ್ಲಿ 1.2 ಮಿಲಿಯನ್ ಮಕ್ಕಳು ಭಿಕ್ಷೆ ಎತ್ತುತ್ತಿದ್ದಾರೆ. ಪಾಕಿಸ್ತಾನದಲ್ಲಿ ಅತಿವೇಗವಾಗಿ ಬೆಳೆಯುತ್ತಿರುವ ಉದ್ಯಮವೆಂದರೆ ಭಿಕ್ಷೆ ಎನ್ನಲಾಗುತ್ತಿದೆ.

ಅಲ್ಲಿನ ಪ್ರಧಾನಿಯೇ 40 ಕೋಟಿ ಪಾಕಿಸ್ತಾನೀಯರಿಗಾಗಿ ಬೇಡುವಾಗ, ಪ್ರಜೆಗಳು ಅದನ್ನು ಪಾಲಿಸುವುದರಲ್ಲಿ ಅತಿಶಯವಿಲ್ಲ. ಅಲ್ಲಿನ ಪ್ರಧಾನಿ ಶಹಬಾಜ್ ಷರೀಫ್‌ರನ್ನು 'ಸ್ಪೀಡ್ ಷರೀಫ್' ಎಂದು ಕರೆಯಲು ಕಾರಣವೇ, ಅವರು ಅತಿಶೀಘ್ರವಾಗಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಾರೆಂಬುದು. ಅವರು ಅಷ್ಟೇ ಶೀಘ್ರವಾಗಿ ಭಿಕ್ಷೆಯನ್ನೂ ತರುತ್ತಾರೆ ಎಂಬ ಖ್ಯಾತಿಯೂ ಇದೆ. ನಂಬುವಿರೋ ಇಲ್ಲವೋ, ಅವರು ಪ್ರಧಾನಿಯಾದ ತಕ್ಷಣ ವಿದೇಶಕ್ಕೆ ತೆರಳಿ ಹೇಳಿಕೆ ನೀಡಿದ್ದು- 'ನಾವು ಭಿಕ್ಷುಕರಲ್ಲ, ಆದರೆ ನಮಗೆ ಮತ್ತ್ಯಾವ ಆಯ್ಕೆಯೂ ಇಲ್ಲ' ಎಂದು!

ಹೀಗೆ ವಿದೇಶಗಳಿಂದ ಶೀಘ್ರವಾಗಿ ಹಣವೆತ್ತಬಲ್ಲ ಸಾಮರ್ಥ್ಯ ಹಾಗೂ ಮಾಡಿರುವ ಸಾಲವನ್ನು ಮರುಪಾವತಿಸದೇ ಇರುವ ಜಾಣ್ಮೆ ತೋರುವಂಥವರನ್ನೇ ಅಲ್ಲಿ ವಿದೇಶಾಂಗ ಸಚಿವರನ್ನಾಗಿ ಮಾಡಲಾಗುತ್ತದೆ. ಅಮೆರಿಕದ ಹಬೀಬಿ ಬ್ಯಾಂಕಿನ ನಿರ್ವಹಣೆಯನ್ನು ಸೂಕ್ತವಾಗಿ ಮಾಡದೆ ಕಾಳಧನ ಮಾಡುವುದರಲ್ಲಿ ಕುಖ್ಯಾತಿಯನ್ನು ಪಡೆದ ಮೊಹಮ್ಮದ್ ಔರಂಗಜೇಬ್ ಅಲ್ಲಿನ ಅರ್ಥಸಚಿವ. ಹಣ ಲಪಟಾಯಿಸಲು ಸುಲಭವಾಗಲೆಂದು ಅವರನ್ನು ವಿತ್ತ ಸಚಿವರನ್ನಾಗಿ ಮಾಡಿರಬಹುದಾ? ಇವರ ಕಾರ್ಯದಕ್ಷತೆ ಎಷ್ಟೆಂದರೆ, ಪಾಕಿಸ್ತಾನದ ರಿಸರ್ವ್ ಬ್ಯಾಂಕಿನಿಂದ ಮುದ್ರಣವಾಗಿ ಹೊರಬಂದ ನೋಟಿನ ಕಂತೆಯಲ್ಲಿ ಹಲವಾರು ನೋಟುಗಳ ಹಿಂಬದಿಯಲ್ಲಿ ಮುದ್ರಣ ಕಾಣದೆ ಮಾಧ್ಯಮದ ಮುಂದೆ ನಗೆಪಾಟಲಿಗೆ ಈಡಾಗಿದ್ದರು!

ಇದಕ್ಕಿಂತಲೂ ಹಾಸ್ಯಾಸ್ಪದ ಸಂಗತಿಯೆಂದರೆ ದೇಶದ ಅಧ್ಯಕ್ಷರದ್ದು. ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರು ತಮ್ಮ ಮಗಳು ಆಸಿಫ್ ಭುಟ್ಟೋ ಜರ್ದಾರಿಯನ್ನು ದೇಶದ ಮೊದಲ ಮಹಿಳೆಯನ್ನಾಗಿ ಘೋಷಿಸಿದ್ದಾರೆ. ವಿಶ್ವದ ಯಾವುದೇ ದೇಶದಲ್ಲಿ 'ಫಸ್ಟ್ ಲೇಡಿ' ಎಂದರೆ ಸಾಮಾನ್ಯವಾಗಿ ಒಂದೇ ಪರಿಕಲ್ಪನೆ ಇರುತ್ತದೆ. ಆದರೆ ಪಾಕಿಸ್ತಾನದ ಮೊದಲ ಮಹಿಳೆ ಇವರ ಮಗಳು! ಇದನ್ನು ನೋಡಿದಾಗ, 'ಇದು ಎಂಥಾ ಲೋಕವಯ್ಯಾ' ಎಂಬ ಹಾಡು ನೆನಪಾಗುತ್ತದೆ.

ಮೊದಲೆಲ್ಲ, ಪಾಕಿಸ್ತಾನೀಯರ ನಡತೆಯನ್ನು ನೋಡುತ್ತಿದ್ದರೆ ಕೋಪ ಮತ್ತು ಅಸಹ್ಯ ಉಂಟಾಗುತ್ತಿತ್ತು. ಆದರೆ ಈಗ ವಿಷಾದದ ನಗೆ ಹೊಮ್ಮುತ್ತದೆ. ತನ್ನಲ್ಲೇ ಇಷ್ಟೊಂದು ಹುಳುಕುಗಳನ್ನು ಇಟ್ಟುಕೊಂಡಿದ್ದರೂ ಪಾಕಿಸ್ತಾನಕ್ಕೆ ಭಾರತದ ಕುರಿತೇ ಚಿಂತೆ! ಭಾರತದ ಪ್ರಧಾನಿ ಏನು ತಿಂದರು? ಯಾವ ದೇಶಕ್ಕೆ ಹೋದರು? ಯಾವ ಕಾನೂನು ತಂದರು? ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಿದ್ದು ಸರಿಯಾ? ಎಂದೆಲ್ಲಾ ಸಲ್ಲದ ವಿಷಯಗಳಲ್ಲಿ ಮೂಗು ತೂರಿಸುವ ಬುದ್ಧಿಯನ್ನು ಅದಿನ್ನೂ ಬಿಟ್ಟಿಲ್ಲ. ಭಾರತ ತನ್ನೊಂದಿಗೆ ವ್ಯಾಪಾರ-ವ್ಯವಹಾರ ನಡೆಸಲಿ ಎಂಬ ಆಸೆಯೂ ಅದಕ್ಕಿದೆ. ಆದರೆ ಅದು ಸದ್ಯೋಭವಿಷ್ಯದಲ್ಲಿ ಕೈಗೂಡುವ ಸಾಧ್ಯತೆಯಿಲ್ಲ.

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅರ್ಥವಾಗದ ರಾಜಕಾರಣ

ಕರ್ನಾಟಕದಲ್ಲಿ ಇತ್ತೀಚೆಗಷ್ಟೇ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ನೀಡಿದ್ದ ಕೆಆರ್‌ಪಿಪಿ ಪಕ್ಷದ ಸಂಸ್ಥಾಪಕ ಮತ್ತು ಶಾಸಕ ಜನಾರ್ದನ ರೆಡ್ಡಿಯವರು ಬಿಜೆಪಿಗೆ ಮರಳಿದ್ದಾರೆ. ಬಿಜೆಪಿಯ ಶಾಸಕ ಎಸ್.ಟಿ. ಸೋಮಶೇಖರ್ ಅವರು ಕಾಂಗ್ರೆಸ್ ಪಕ್ಷದ ಪರವಾಗಿ ಮತ ಚಲಾಯಿಸಿದರೆ, ಮತ್ತೊಬ್ಬ ಶಾಸಕ ಹೆಬ್ಬಾರ್ ಅವರು ಮತದಾನ ಮಾಡಲೇ ಇಲ್ಲ. ಇವರಿಬ್ಬರ ಮೇಲೆ ಪಕ್ಷವು ಶಿಸ್ತುಕ್ರಮವನ್ನೂ ಜರುಗಿಸಲಿಲ್ಲ. ಮತ್ತೊಂದೆಡೆ, ಸ್ವಂತ ಬಲದಿಂದಲೇ ಮೂರು ಕ್ಷೇತ್ರಗಳನ್ನು ಗೆಲ್ಲುವ ಸಾಮರ್ಥ್ಯವಿದ್ದ ಜೆಡಿಎಸ್, ಆ ಮೂರು ಸ್ಥಾನಗಳಿಗಾಗಿ, ತಾನು ಕೆಲವೇ ತಿಂಗಳ ಹಿಂದೆ ನಿಂದಿಸುತ್ತಿದ್ದ ಬಿಜೆಪಿಯ ಜತೆಗೆ ಮೈತ್ರಿ ಮಾಡಿಕೊಂಡಿದೆ. 'ರಾಜಕಾರಣಿಗಳ ಸಂಗ ಮಾಡಿದರೆ ಓದಿದ್ದೇ ವ್ಯರ್ಥ ಎನಿಸುತ್ತದೆ' ಎಂದು ಭಾಷಣ ಮಾಡಿದ್ದ 'ಹೃದಯ'ವಂತರು, ಲೋಕಸಭಾ ಚುನಾವಣೆಯಲ್ಲೀಗ ಅಭ್ಯರ್ಥಿಯಾಗಿ ಸ್ವಯಂ ರಾಜಕಾರಣಿ ಆಗಿಬಿಟ್ಟರು. 'ರಾಜನೇ ಪ್ರತ್ಯಕ್ಷ ದೇವರು' ಎಂದು ಇಂದಿಗೂ ಭಾವಿಸುವ ಜನರ ನಡುವೆ, ರಾಜವಂಶಸ್ಥರೇ ಅಭ್ಯರ್ಥಿಯಾಗಿ ಆ ಜನರ ಬಳಿ ಬಂದು ಮತವನ್ನು ಯಾಚಿಸುತ್ತಾರೆ. ಯಾವುದೋ ಕಾರಣಕ್ಕೆ ಪಕ್ಷದಿಂದ ಟಿಕೆಟ್ ಸಿಗದಿದ್ದರೆ, ಮಾತೃಪಕ್ಷವನ್ನೇ ವಾಚಾಮಗೋಚರ ನಿಂದಿಸಿ ಮತ್ತೊಂದು ಪಕ್ಷವನ್ನು ಸೇರುವವರೂ ನಮ್ಮಲ್ಲಿ ಕಡಿಮೆಯೇನಿಲ್ಲ. ಅಂಥವರಿಗೆ ಕೆಂಪುಹಾಸಿನ ಸ್ವಾಗತ ಕೋರುವವರು ಸಹ ಸಾಕಷ್ಟಿದ್ದಾರೆ. ಇವನ್ನೆಲ್ಲಾ ನೋಡುತ್ತಿದ್ದರೆ ರಾಜಕಾರಣಿಗಳಿಗೆ ಆತ್ಮಸಾಕ್ಷಿಯೇ ಇಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಅಂತಿಮವಾಗಿ ಜನಸಾಮಾನ್ಯರಿಗೆ ರಾಜಕಾರಣ ಅರ್ಥವಾಗುವುದೇ ಇಲ್ಲ. ರಾಜಕೀಯ ಅಂದರೆ ಹೀಗೇನಾ...?!

-**ಪತ್ತಂಗಿ ಎಸ್. ಮುರಳಿ** ಬೆಂಗಳೂರು

ಹಾರ್ನ್ ಗಲಿಬಿಲಿ

ಕಾಡಿನಲ್ಲಿ ಹುಲಿ-ಸಿಂಹ ಗರ್ಜಿಸಿದರೆ, ಊರೊಳಗೆ ನಾಯಿ ಬೊಗಳಿದರೆ ಪರಿಚಿತವಾದದ್ದರಿಂದ ಅದು ಸಹ್ಯ. ಆದರೆ ಕೆಲವು ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಚಾಲಕರು ತಮ್ಮ ವಾಹನಗಳಿಗೆ ಕಾರಿನ ಮತ್ತು ಲಾರಿಯ ಹಾರ್ನ್‌ಗಳನ್ನು ಅಳವಡಿಸಿಕೊಂಡು ಊರು-ಕೇರಿಗಳಲ್ಲಿ ಅಸಹನೀಯ ಪರಿಸ್ಥಿತಿಯನ್ನು ಸೃಷ್ಟಿಸುವುದಿದೆ. ಇಂತಿಂಥ ವಾಹನಗಳಿಗೆ ಇಷ್ಟಿಷ್ಟು ಡೆಸಿಬೆಲ್ ಶಬ್ದ ಅಂತ ಆರ್‌ಟಿಒ ಅಧಿಕಾರಿಗಳು ಗೊತ್ತುಪಡಿಸಿದ್ದಾರೆ. ಆದರೆ ಈ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಹೆಲ್ಮೆಟ್, ಚಾಲನಾ ಪರವಾನಗಿ, ಇನ್ಶೂರೆನ್ಸ್, ದಂಡ ವಿವರ ಇತ್ಯಾದಿಗಳನ್ನು ಪರಿಶೀಲಿಸುವ ಪೊಲೀಸರು ಮೇಲೆ ಉಲ್ಲೇಖಿಸಲಾಗಿರುವ ಸಮಸ್ಯೆಗಳ ಕಡೆಗೆ ಗಮನ ಹರಿಸುತ್ತಿಲ್ಲ. ಎಷ್ಟೋ ಹಿರಿಯ ನಾಗರಿಕರು ಇಂಥ ಅಸಹನೀಯ ಹಾರ್ನ್‌ಗಳಿಂದ ಭಯ ಬೀಳುತ್ತಿದ್ದಾರೆ. ನಮ್ಮ ಅಳಲನ್ನು ಯಾರಲ್ಲಿ ತೋಡಿಕೊಳ್ಳೋದು?

- **ರಾಘಣ್ಣ**, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು